ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.17/2025</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮುತ್ತುರಾಜ್ ಹೆಚ್ | ಪಿ.ಡಬ್ಲ್ಯೂ.6 |
| ತಂದೆಯ ಹೆಸರು | : | ಹನುಮಯ್ಯ | ಸಿ.ಡಬ್ಲ್ಯೂ.8 |
| ವಯಸ್ಸು | : | 41 ವರ್ಷ | |
| ವೃತ್ತಿ | : | ಪೊಲೀಸ್ ಇನ್ಸ್ ಪೆಕ್ಟರ್, ರಾಜ್ಯ ಗುಪ್ತ ವಾರ್ತೆ, ಬೆಂಗಳೂರು | |
| ವಾಸ | : | ಬೆಂಗಳೂರು | |

<u>ದಿನಾಂಕಃ 03-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ದಿಃ10.12.2021 ರಿಂದ ದಿಃ22.02.2022 ರವರೆಗೆ ಚಿಕ್ಕಮಗಳೂರು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ18.02.2022 ರಂದು ಬೆಂಗಳೂರು ಸಿ.ಐ.ಡಿ ವಿಶೇಷ ಘಟಕದಿಂದ ನೊಂದಣಿ ಅಂಚೆ ಮೂಲಕ ಬಂದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಪ್ರ.ವ. ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-15(ಎ) ಇರುತ್ತದೆ. ದೂರನ್ನು ನೋಡುತ್ತಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-16(ಎ) ಇರುತ್ತದೆ. ದಿಃ19.02.2022

ರಂದು ಸೈಬರ್ ಟಿಪ್ ಲೈನ್ ರಿಪೋರ್ಟ್ ದೂರು ಸಂಖ್ಯೆಃ84223479 ರ ಮೂಲ ಸಿ.ಡಿ.ಯನ್ನು ಕಂಪ್ಯೂಟರ್ ನಲ್ಲಿ ಹಾಕಿ ತೆರೆಯಲು ಚಾಸಾ-1 ಮತ್ತು 2 ರವರನ್ನು ಠಾಣೆಗೆ ಕರೆದು ಕಂಪ್ಯೂಟರ್ ಗೆ ಅಳವಡಿಸಿ ಸದರಿ ಸಿ.ಡಿ ಯನ್ನು ಪರಿಶೀಲನೆ ಮಾಡಿ ಅದರಲ್ಲಿ ಒಂದು  ವೀಡಿಯೋ ಫೈಲ್ ಇದ್ದು Google-ct-rpt-b2f801e3a32fd6019d4e8176a05e644d-share file c ಎಂದು ಹೆಸರಿದ್ದು ಸದರಿ ಸಿ.ಡಿ ವೀಡಿಯೋ 00:01:11 ಅವಧಿಯಾಗಿರುತ್ತದೆ. ಸದರಿ ವೀಡಿಯೊವನ್ನು ಪರಿಶೀಲಿಸಿದಾಗ ಯಾವುದೋ ಒಂದು ಕೋಣೆಯಲ್ಲಿ ಮಂಚದ ಮೇಲೆ ಒಬ್ಬ ವಯಸ್ಕ ಪುರುಷನು ಅಪ್ರಾಪ್ತ ಬಾಲಕಿಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಂಡ ವೀಡಿಯೋ ಆಗಿರುತ್ತದೆ. ನಂತರ ಮೊಬೈಲ್ ನಲ್ಲಿ ಫೋಟೋವನ್ನು ತೆಗೆದು ಠಾಣೆಯ ಪ್ರಿಂಟರ್ ನಿಂದ ಫೋಟೋ ಪ್ರಿಂಟ್ ತೆಗೆದಿರುತ್ತೇವೆ. ಸದರಿ ಸಿ.ಡಿ.ಯಲ್ಲಿ ಇರುವ ಒಂದು ವೀಡಿಯೋವನ್ನು ಮತ್ತು ಮಾಹಿತಿಯನ್ನು ಮುಂದಿನ ತನಿಖೆಯ ಸಂಬಂಧ ಇನ್ನೊಂದು ಡಿ.ವಿ.ಡಿ ಗೆ ಕಾಪಿ ಮಾಡಿ ನನ್ನ ಬಳಿ ಇಟ್ಟುಕೊಂಡಿರುತ್ತೇನೆ. ನಂತರ ಮೂಲ ಸಿ.ಡಿ.ಯನ್ನು ಮುಂದಿನ ತನಿಖೆಯ ಬಗ್ಗೆ ಒಂದು ಲಕೋಟೆಯಲ್ಲಿ ಹಾಕಿ, ಲಕೋಟೆ ಮೇಲೆ ಚೀಟಿ ಅಂಟಿಸಿ ಪ್ರಕರಣದ ವಿವರ ಬರೆದು ಪಂಚರ ಹಾಗೂ ನನ್ನ ಸಹಿ ಮಾಡಿರುತ್ತೇವೆ. ನಂತರ ಅದನ್ನು ಪಿ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಸಿ.ಡಿ. ಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆಯನ್ನು  ಸಂಜೆಃ 05.05 ಗಂಟೆಯಿಂದ 07.00 ಗಂಟೆಯವರೆಗೆ ತಯಾರಿಸಲಾಗಿರುತ್ತದೆ. ಸದರಿ ಮಹಜರ್ ಅನ್ನು

ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-3(ಸಿ) ಇರುತ್ತದೆ. ನೋಟೀಸ್ ಅನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-1(ಸಿ) ಇರುತ್ತದೆ. ನಂತರ ಆರೋಪಿಯನ್ನು ಪತ್ತೆ ಹಚ್ಚಲು ಪಿ.ಸಿ ಮಹೇಶ್ ರವರನ್ನು ನೇಮಿಸಿರುತ್ತೇನೆ.

ದಿಃ14.07.2022 ರಂದು ಆರೋಪಿಯನ್ನು ಠಾಣೆಗೆ ಸಿಬ್ಬಂದಿಯವರು ತಂದು ಹಾಜರುಪಡಿಸಿರುತ್ತಾರೆ. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನೋಡುತ್ತಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-17(ಎ) ಇರುತ್ತದೆ, ಆರೊಪಿಯ ಸಹಿ ನಿಪಿ-17(ಬಿ) ಇರುತ್ತದೆ. ಆರೋಪಿಯು ಕೆಂಪು ಬಣ್ಣದ ಎಂ.ಐ ಕಂಪನಿಯ ಮೊಬೈಲ್ ಅನ್ನು ಹಾಜರುಪಡಿಸಿರುತ್ತಾರೆ. ಆರೋಪಿಯು ಹಾಜರುಪಡಿಸಿದ ಮೊಬೈಲ್ ಅನ್ನು ಪಂಚರಾದ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಬೆಳಗ್ಗೆಃ10.00 ರಿಂದ 11.00 ರವರೆಗೆ ಅಮಾನತ್ತು ಪಂಚನಾಮೆಯನ್ನು ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಚಾಸಾ-3 ಮತ್ತು ಚಾಸಾ-4 ರವರಿಗೆ ನೀಡಿದ ನೋಟೀಸ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-2(ಸಿ) ಇರುತ್ತದೆ. ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-4(ಸಿ) ಇರುತ್ತದೆ. ಆ ಸಮಯದಲ್ಲಿ ಅಮಾನತ್ತುಪಡಿಸಿದ ಮೊಬೈಲ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ಸದರಿ ಮೊಬೈಲ್ ಅನ್ನು ಓಪನ್ ಮಾಡಿ ಫೋಟೋ

ಗ್ಯಾಲರಿ, ವಾಟ್ಸಾಪ್ ಮೆಸೇಜ್ ಬಾಕ್ಸ್ ಗಳನ್ನು ಹಾಗೂ ಫೇಸ್ ಬುಕ್ ಖಾತೆಯನ್ನು ಪರಿಶೀಲಿಸಿ ನೋಡಲಾಗಿ ಮೊಬೈಲ್ ನಲ್ಲಿ ಘಟನೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಕಂಡುಬಂದಿರುವುದಿಲ್ಲ. ಆರೋಪಿಯನ್ನ ವಿಚಾರಿಸಲಾಗಿ ಮಕ್ಕಳ ಅಶ್ಲೀಲತೆ ಇರುವ ವೀಡಿಯೋವನ್ನು ತಾನು ತನ್ನ ವಾಟ್ಸಾಪ್ ಖಾತೆಯಲ್ಲಿ ಹಾಕಿ ಸದರಿ ವಾಟ್ಸಾಪ್ ಖಾತೆಯಿಂದ ಡಿಲೀಟ್ ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಮೊಬೈಲ್ ಕೃತ್ಯಕ್ಕೆ ಸಂಬಂಧಪಟ್ಟಿರುವುದರಿಂದ ಎಫ್.ಎಸ್.ಎಲ್ ತಜ್ಞರ ಪರೀಕ್ಷೆಗೆ ಕಳುಹಿಸಿಕೊಡಲು ಮೊಬೈಲ್ ಸೆಟ್ ಅನ್ನು ಸ್ವಿಚ್ ಆಫ್ ಮಾಡಿ ಒಂದು ಲಕೋಟೆಯಲ್ಲಿ ಹಾಕಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಈ ಬಗ್ಗೆ ಫೋಟೋವನ್ನು ತೆಗೆದಿರುತ್ತೇನೆ. ಪಂಚರಿಗೆ ನೀಡಿದ ನೋಟೀಸ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-10(ಬಿ) ಇರುತ್ತದೆ. ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-11(ಬಿ) ಇರುತ್ತದೆ. ಫೋಟೋವನ್ನು ನೋಡುತ್ತಿದ್ದು ನಿಪಿ-18 ಎಂದು ಗುರುತಿಸಲಾಯಿತು.

ಸದರಿ ಮೊಬೈಲ್ ಅನ್ನು ಪಿ.ಎಫ್. ನಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮೊಬೈಲ್ ಅನ್ನು ತಜ್ಞರ ಪರೀಕ್ಷೆಗಾಗಿ ಬೆಂಗಳೂರಿಗೆ ಸಿಬ್ಬಂದಿಯ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿಃ19.02.2022 ರಂದು ಚಾಸಾ-1 ಮತ್ತು ಚಾಸಾ-2 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ-1 ಮತ್ತು 2 ರವರು ನನ್ನ ಮುಂದೆ ನಿಪಿ-8 ಮತ್ತು 9 ರಂತೆ ಹೇಳಿಕೆ ನೀಡಿರುತ್ತಾರೆ. ದಿಃ15.07.2022 ರಂದು ಚಾಸಾ-5 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಸದರಿಯವರು ನನ್ನ ಮುಂದೆ ನಿಪಿ-12 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ಚಾಸಾ-6 ರವರಿಂದ 65(ಬಿ) ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-14(ಬಿ) ಇರುತ್ತದೆ. ತಜ್ಞರ ಪರೀಕ್ಷೆಗಾಗಿ ಕಳುಹಿಸಿದ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-19(ಎ) ಇರುತ್ತದೆ. ನಂತರ ರಾಸಾಯನಿಕ ತಜ್ಞರ ವರದಿಯನ್ನು ಪಡೆಯಲು ಬಾಕಿ ಇಟ್ಟುಕೊಂಡು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ದೂರನ್ನು ಸ್ವೀಕರಿಸಿದ ನಂತರ ನಾನು ಪ್ರ.ವ. ವರದಿಯನ್ನು ದಾಖಲಿಸಿದ್ದು ಅದಕ್ಕಿಂತ ಪೂರ್ವದಲ್ಲಿ ಪ್ರಾಥಮಿಕ ವಿಚಾರಣೆಯನ್ನು ಮಾಡಲು ಬರುವುದಿಲ್ಲ. ನಿಪಿ-16 ರಲ್ಲಿ ಎನ್.ಸಿ.ಆರ್ ನಿಂದ ಬಂದ ದೂರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ16 ರಲ್ಲಿ ಆರೋಪಿಯು ಯಾವ ರೀತಿಯ ಅಪರಾಧ ಮಾಡಿರುತ್ತಾರೆ ಎನ್ನುವ ಬಗ್ಗೆ ವಿವರಣೆ ಇರುವುದಿಲ್ಲ ಎಂದರೆ ಸಾಕ್ಷಿದಾರರು ಆರೋಪಿಯ ಬಗ್ಗೆ ಮಾಹಿತಿ ಇರುವುದಿಲ್ಲ, ಆದರೆ, ಫೋನ್ ನಂಬರ್ ಹಾಗೂ ಆರೋಪಿಯ ವಿಳಾಸ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-16 ರಲ್ಲಿ ಆರೋಪಿಯ ವಿಳಾಸ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-16 ರಲ್ಲಿ ಅಪರಾಧದ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ಆರೋಪಿಯ ಹೆಸರು, ವಿಳಾಸ ಇರುವುದಿಲ್ಲ ಹಾಗೂ ನಾವೇ ಸದರಿ ಆರೋಪಿ ಹೆಸರನ್ನು ಹಾಗೂ ವಿಳಾಸವನ್ನು ಸದರಿ ದೂರಿನ ಜೊತೆಗೆ ಪ್ರತ್ಯೇಕ ಶೀಟ್ ನಲ್ಲಿ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ.1 ಮೊಬೈಲ್ ನಲ್ಲಿ ಯಾವುದೇ ರೀತಿಯ ಅಶ್ಲೀಲವಾದ ಚಿತ್ರಗಳು ಇರಲಿಲ್ಲ ಎಂದರೆ ಸಾಕ್ಷಿದಾರರು ಅದು ಹಾಳಾಗಿದ್ದುದರಿಂದ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಹಾಳಾಗಿರುವ ಮೊಬೈಲ್ ಅನ್ನು ನಾನು ರಾಸಾಯನಿಕ ತಜ್ಞ ಪರೀಕ್ಷೆಗಾಗಿ ಎಫ್.ಎಸ್.ಎಲ್. ಗೆ ಕಳುಹಿಸಿರುತ್ತೇನೆ ಎಂದರೆ ಸರಿ. ಎಫ್.ಎಸ್.ಎಲ್. ವರದಿಯನ್ನು ಪಡೆದುಕೊಳ್ಳದೆಯೇ ನಾನು ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಎಫ್.ಎಸ್.ಎಲ್. ವರದಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಬೇಕಾಗಿರುವ ಮುಖ್ಯ ಸಾಕ್ಷ್ಯ ಎಂದರೆ ಸರಿಯಲ್ಲ. ಸದರಿ ಎಫ್.ಎಸ್.ಎಲ್. ವರದಿ ಇಲ್ಲದೆ ನಾನು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮೊಬೈಲ್ ಹಾಗೂ ಅದರಲ್ಲಿ ಇದೆ ಎನ್ನಲಾದ ವಿವರ ಹಾಗೂ ಎಫ್.ಎಸ್.ಎಲ್ ವರದಿ ದೋಷಾರೋಪಣೆ ಪಟ್ಟಿ ಸಲ್ಲಿಸಲು ಮುಖ್ಯವಾದ ಸಾಕ್ಷ್ಯ ಎಂದರೆ ಸರಿಯಲ್ಲ. ಆರೋಪಿಯ ಹೇಳಿಕೆ ಮೇರೆಗೆ ಮಾತ್ರ ನಾನು ಆತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಮೊಬೈಲ್ ನಲ್ಲಿ ಇರುವ ಎಕ್ಸ್ ಟ್ರ್ಯಾಕ್ಟ್ ಅನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಮು.ಮಾ.2 ಸಿ.ಡಿ.ಯಲ್ಲಿ

ಇರುವ ಯಾವುದೇ ವಿವರಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.2 ರಲ್ಲಿ ಆರೋಪಿಗೆ ಸಂಬಂಧಪಟ್ಟ ಯಾವುದೇ ವಿವರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಗೂಗಲ್ ನಿಂದ ತನ್ನ ಮೊಬೈಲ್ ಗೆ ಪಾರ್ನ್ ವೀಡಿಯೋವನ್ನು ಡೌನ್ ಲೋಡ್ ಮಾಡಿ ತನ್ನ ವೆ ಮೊಬೈಲ್ ನಿಂದ ಬೇರೆಯವರಿಗೆ ವಾಟ್ಸಾಪ್ ಮಾಡಿರುತ್ತಾನೆ. ಬೇರೆ ಯಾವ ಮೊಬೈಲ್ ಗೆ Forward ಮಾಡಿರುತ್ತಾನೆ ಎನ್ನುವ ಬಗ್ಗೆ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯು ತನ್ನ ಮೊಬೈಲ್ ನಿಂದ ಯಾರಿಗೂ ಅಶ್ಲೀಲ ವೀಡಿಯೋವನ್ನು Forward ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಷ್ಟು ಜನರಿಗೆ ಸದರಿ ವೀಡಿಯೋವನ್ನು Forward ಮಾಡಿರುತ್ತಾರೆ ಎನ್ನುವ ಬಗ್ಗೆ ನಮಗೆ ಗೊತ್ತಾಗುವುದಿಲ್ಲ. ಈ ಬಗ್ಗೆ ನಾನು ತನಿಖೆ ನಡೆಸಿ ಪೂರ್ಣ ವಿವರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ವೀಡಿಯೋವನ್ನು Encript ಮಾಡಿರುವುದರಿಂದ ಅದನ್ನು ಪತ್ತೆ ಹಚ್ಚಲು ಸಾಧ್ಯವಿರುವುದಿಲ್ಲ. ಸದರಿ ವೀಡಿಯೋವನ್ನು ಯಾರು ಯಾರಿಗೆ Forward ಮಾಡಿರುತ್ತಾರೆ ಎನ್ನುವ ಬಗ್ಗೆ ನಮ್ಮಲ್ಲಿ ವಿವರಗಳು ಇರುವುದಿಲ್ಲ ಎಂದರೆ ಸರಿ. ಸದರಿ ಅಶ್ಲೀಲ ವೀಡಿಯೋ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಅಂತಹ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಆರೋಪಿ ಸದರಿ ವೀಡಿಯೋವನ್ನು ನೋಡಿರುತ್ತಾರೆ. ಆರೋಪಿಯು ನನ್ನ ಮುಂದೆ ಯಾವುದೇ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ವಶದಲ್ಲಿ ಇದ್ದಾಗ ನಮ್ಮ

ಮನಸ್ಸಿಗೆ ಬಂದಂತೆ ಆತನ ಸ್ವಇಚ್ಛಾ ಹೇಳಿಕೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾನೆ ಎನ್ನುವ ಸಮಯದಲ್ಲಿ ನಾನು ಯಾವುದೇ ವೀಡಿಯೋ ಅಥವಾ ಫೋಟೋ ತೆಗೆದಿರುವುದಿಲ್ಲ ಎಂದರೆ ಸರಿ. ಆರೋಪಿಯು ಯಾವುದೇ ತಪ್ಪನ್ನು ಮಾಡಿಲ್ಲ ಎಂದು ಕಂಡುಬಂದಿದ್ದರೂ ಕೂಡಾ ಆತನ ವಿರುದ್ಧ ಒಂದು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಮೊಬೈಲ್ ಗೂ ಹಾಗೂ ಸಿಮ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಫೋಟೋಗಳನ್ನಾಗಲೀ ಅಥವಾ ಮಹಜರ್ ಅನ್ನು ಆಗಲೀ ಪಂಚರ ಸಮಕ್ಷಮ ಮಾಡಿರುವುದಿಲ್ಲ ಹಾಗೂ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ